I/325090/2022

ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ:ಡಿಟಿಇ/13/ಸಿಸಿಟೆಕ್/2022(807409)

ಆಯುಕ್ತರ ಕಛೇರಿ,
ತಾಂತ್ರಿಕ ಶಿಕ್ಷಣ ಭವನ, ಅರಮನೆ ರಸ್ತೆ,
ಬೆಂಗಳೂರು-560001,
ದಿ:12-10-2022.

ಇವರಿಗೆ,

ಪ್ರಾಚಾರ್ಯರು,
ಸರ್ಕಾರಿ ಪಾಲಿಟೆಕ್ನಿಕ್,
ತುಮಕೂರು

ಮಾನ್ಯರೇ,

ವಿಷಯ:- ಸಿಸಿಟೆಕ್ ಉಪಘಟಕದ ಮೂಲಕ ಆಯೋಜಿಸುತ್ತಿರುವ "Industrial Automation and Robotics" ಅಲ್ಪಾವಧಿ ತರಬೇತಿಗೆ ಅನುಮೋದನೆ ನೀಡುವ ಬಗ್ಗೆ.

ಉಲ್ಲೇಖ:-
1. ತಮ್ಮ ಪತ್ರ ಸಂಖ್ಯೆ : ಜಿ.ಪಿ.ಟಿ/ ಸಿಸಿಟೆಕ್ : 2022-23 / 01119 ದಿನಾಂಕ: 03-10-2022.
2. ಈ ಕಛೇರಿ ಸುತ್ತೋಲೆ ಸಂಖ್ಯೆ: ಡಿಟಿಇ : 10 : ಸಿಸಿಟೆಕ್ : 2017-18 : 2776 : ದಿನಾಂಕ:18-01-2019.

-----

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1)ರ ತಮ್ಮ ಕಛೇರಿ ಪತ್ರದಲ್ಲಿ ಸಂಸ್ಥೆಯ ಸಿಸಿಟೆಕ್ ಉಪಘಟಕದ ಅಡಿಯಲ್ಲಿ "Industrial Automation and Robotics" ಎಂಬ ವಿಷಯದ ಬಗ್ಗೆ ಶೈಕ್ಷಣಿಕ ಕಾರ್ಯಚಟುವಟಿಕೆಗಳಿಗೆ ತೊಂದರೆಯಾಗದಂತೆ ದಿನಾಂಕ: 17/10/2022 ರಿಂದ 21/10/2022 ರವರೆಗೆ ಒಂದು ವಾರ ಅಲ್ಪಾವಧಿ ತರಬೇತಿ ಕಾರ್ಯಕ್ರಮವನ್ನು ಅಯೋಜಿಸಲು ಅನುಮತಿ ನೀಡುವಂತೆ ಕೋರಿರುತ್ತೀರಿ.

ಉಲ್ಲೇಖ (2)ರ ಈ ಕಛೇರಿ ಸುತ್ತೋಲೆಯಲ್ಲಿನ ನಿಯಮ / ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ಸೂಚಿಸಿ, ಸದರಿ ತರಬೇತಿ ಕಾರ್ಯಕ್ರಮವನ್ನು ನಿಯಮಾನುಸಾರ ನಡೆಸಲು ಅನುಮತಿ ನೀಡಲಾಗಿದೆ.

ಸದರಿ ತರಬೇತಿಯಲ್ಲಿ ಭಾಗವಹಿಸಲು ನೊಂದಾಯಿಸಿಕೊಂಡಿರುವ ಉಪನ್ಯಾಸಕರ ಪಟ್ಟಿಗೆ ದಿನಾಂಕ:15-10-2022ರೊಳಗಾಗಿ ಇಲಾಖೆಯಿಂದ ಕಡ್ಡಾಯವಾಗಿ ಅನುಮೋದನೆ ಪಡೆದು, ತದನಂತರ ತರಬೇತಿಯನ್ನು ಪ್ರಾರಂಭಿಸಲು ಈ ಮೂಲಕ ಸೂಚಿಸಲಾಗಿದೆ.

ತಮ್ಮ ವಿಶ್ವಾಸಿ,

ಜಂಟಿ ನಿರ್ದೇಶಕರು(ಸಿಡಿಸಿ).

14/10/22

ಪ್ರತಿ:-
1. ಸಿಸಿಟೆಕ್ – ಕಡತಕ್ಕೆ.
2. ಇ. ಆಡಳಿತ ವಿಭಾಗಕ್ಕೆ - ಇಲಾಖಾ ವೆಬ್‌ಸೈಟನಲ್ಲಿ ಪ್ರಕಟಿಸಲು.